**II Semester 3 Year LL.B./VI Semester 5 Year B.Com. LL.B./B.A. LL.B. (Maj-Min.-System)/B.A. LL.B./B.B.A. LL.B. Examination, April/May 2022 (Dec. 2021)**

# ADMINISTRATIVE LAW

Duration : 3 Hours Max. Marks : 100

**Instructions : 1. Answer Q. No. 9 and any five of the remaining questions.**

**2. Q. No. 9 carries 20 marks and the remaining questions carry 16 marks each.**

**3. Answers should be written either in English or in Kannada completely.**

Q. No. 1. What is administrative law ? Explain the objectives and sources of administrative law. Marks : 16

ಆಡಳಿತದ ಕಾನೂನು ಎಂದರೇನು ? ಆಡಳಿತ ಕಾನೂನಿನ ಧ್ಯೇಯಗಳು ಮತ್ತು ಮೂಲಗಳನ್ನು ವಿವರಿಸಿ.

Q. No. 2. Discuss the grounds of judicial control over delegated legislation. Marks : 16

ಪ್ರತ್ಯಾಯೋಜಿತ ಶಾಸನದ ಮೇಲಿನ ನ್ಯಾಯಿಕ ನಿಯಂತ್ರಣದ ಆಧಾರಗಳನ್ನು ಚರ್ಚಿಸಿ.

Q. No. 3. Explain the applicability of the Doctrine of Rule of Law in Administrative Law. Marks : 16

ಆಡಳಿತದ ಕಾನೂನಿನಲ್ಲಿ ಕಾನೂನಿನ ಆಡಳಿತದ ತತ್ವದ ಅನ್ವಯವನ್ನು ವಿವರಿಸಿರಿ.

Q. No. 4. Narrate the different stages of Fair hearing with decided cases. Marks : 16

ಸೂಕ್ತ ಸುನಾವಣೆಯ ವಿವಿಧ ಹಂತಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ನಿರೂಪಿಸಿ.

Q. No. 5. Examine the scope of judicial review over Administrative Discretion. Marks : 16

ಆಡಳಿತಾತ್ಮಕ ವಿವೇಚನೆಯ ಮೇಲಿನ ನ್ಯಾಯಿಕ ಪರಿಶೀಲನೆಯ ವ್ಯಾಪ್ತಿಯನ್ನು ಪರೀಕ್ಷಿಸಿ.

P.T.O.

Q. No. 6. 'Writ of Certiorari and Prohibition overlap each other' – Explain. Marks : 16

'ಸರ್ಟಿಯೋರಾರಿ ಮತ್ತು ಪ್ರೊಹಿಬಿಷನ್ ರಿಟ್‌ಗಳು ಒಂದಕ್ಕೊಂದು ಅತಿಕ್ರಮಿಸುವಂತಿರುತ್ತದೆ.'– ವಿವರಿಸಿ.

Q. No. 7. Examine critically the scope of Judicial and Public control over Public undertakings. Marks : 16

ಸಾರ್ವಜನಿಕ ಸಂಸ್ಥೆಗಳ ಮೇಲಿನ ನ್ಯಾಯಿಕ ಮತ್ತು ಸಾರ್ವಜನಿಕ ನಿಯಂತ್ರಣದ ವ್ಯಾಪ್ತಿಯನ್ನು ಟೀಕಾತ್ಮಕವಾಗಿ ಪರಿಭಾಷಿಸಿ.

Q. No. 8. Write note on **any two** of the following : Marks : 2×8=16

ಈ ಕೆಳಗಿನ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ.

(a) Ombudsman in India.
ಭಾರತದಲ್ಲಿ ಓಂಬಡ್ಸ್‌ಮನ್.

(b) Role of Central Vigilance Commission.
ಕೇಂದ್ರೀಯ ಜಾಗೃತ ಆಯೋಗದ ಪಾತ್ರ .

(c) Legislative control over delegated legislation.
ಪ್ರತ್ಯಾಯೋಜಿತ ಶಾಸನದ ಮೇಲಿನ ಶಾಸನಾತ್ಮಕ ನಿಯಂತ್ರಣ.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಪರಿಹರಿಸಿ :

(a) The Government of Karunadu framed a regulation to restrain the restaurants in the 'A' grade cities working beyond 9 pm everyday of the week. The objective of the regulation is the maintenance of law and orders. The restaurants owners association challenged the regulation. Decide.

ಕರುನಾಡು ರಾಜ್ಯದ ಸರಕಾರವು ಒಂದು ವಿಧಾಯಕವನ್ನು ಹೊರಡಿಸಿ 'A' ದರ್ಜೆಯ ನಗರಗಳಲ್ಲಿ ಹೋಟೇಲುಗಳು ವಾರದ ಎಲ್ಲಾ ದಿನಗಳಲ್ಲೂ ರಾತ್ರಿ 9 ಗಂಟೆಯ ನಂತರ ಕಾರ್ಯ ನಿರ್ವಹಿಸುವಂತಿಲ್ಲ ಎಂಬುದಾಗಿ ಆಜ್ಞಾಪಿಸುತ್ತದೆ. ಈ ವಿಧಾಯಕದ ಉದ್ದೇಶವು ಕಾನೂನು ಸುವ್ಯವಸ್ಥೆ ಪಾಲನೆಯ ದೃಷ್ಟಿಯಿಂದ ಕೂಡಿರುತ್ತದೆ. ಹೋಟೇಲ್ ಮಾಲೀಕರ ಸಂಘವು ಈ ವಿಧಾಯಕವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿ.

(b) 'A' applied to the Police Commissioner for a license to construct the Cinema Theatre – As per the Relevant Act, the Commissioner of Police before granting the licence shall comply with the related procedure. The Commissioner of Police was asked by the Home Minister not to grant licence to Mr. 'A'. Hence the license was refused. The action of the Commissioner was challenged. Decide giving valid reasons.

ಒಂದು ಸಿನೆಮಾ ಥಿಯೇಟರ್ ನಿರ್ಮಾಣಕ್ಕಾಗಿ ನಗರದ ಪೊಲೀಸ್ ಕಮಿಷನರ್‌ಗೆ ಪರವಾನಿಗೆಗಾಗಿ 'A' ಎಂಬವರು ಅರ್ಜಿ ಹಾಕುವರು. ಸಂಬಂಧಪಟ್ಟ ಶಾಸನದ ಪ್ರಕಾರ ಪೊಲೀಸ್ ಆಯುಕ್ತರು ಪರವಾನಿಗೆ ನೀಡುವ ಮುನ್ನ ಸಂಬಂಧಿಸಿದ ಪ್ರಕ್ರಿಯೆಯನ್ನು ಪಾಲಿಸಬೇಕಾಗುತ್ತದೆ. ಗೃಹಸಚಿವರ ಆದೇಶದಂತೆ ಪೊಲೀಸ್ ಆಯುಕ್ತರು ಅರ್ಜಿದಾರನಿಗೆ ಪರವಾನಗಿಯನ್ನು ನಿರಾಕರಿಸುತ್ತಾರೆ. ಪೊಲೀಸ್ ಆಯುಕ್ತರ ಕ್ರಮವನ್ನು ಪ್ರಶ್ನಿಸಲಾಯಿತು. ಸೂಕ್ತ ಕಾರಣದೊಂದಿಗೆ ನಿರ್ಧರಿಸಿ.

(c) According to the Panchayat Raj Act of a State the Sub-divisional Magistrate was empowered to modify the order of Panchayat Adalat or cancel its jurisdiction. The Sub-division Magistrate cancelled the order of the Panchayat Adalat but maintained the order on some other violation. The action of the Sub-divisional Magistrate was questioned. Decide on its validity.

ಒಂದು ರಾಜ್ಯದ ಪಂಚಾಯತ್ ರಾಜ್ ಕಾಯ್ದೆಯ ಪ್ರಕಾರ ಉಪ-ವಿಭಾಗದ ಮ್ಯಾಜಿಸ್ಟ್ರೇಟ್‌ರು ಪಂಚಾಯತ್ ಅದಾಲತ್‌ನ ಆದೇಶವನ್ನು ತಿದ್ದುಪಡಿ ಅಥವಾ ಅದರ ಅಧಿಕಾರ ವ್ಯಾಪ್ತಿಯನ್ನೇ ರದ್ದುಪಡಿಸುವ ಅಧಿಕಾರ ಹೊಂದಿರುತ್ತಾರೆ. ಉಪ-ವಿಭಾಗದ ಮ್ಯಾಜಿಸ್ಟ್ರೇಟ್‌ರು ಪಂಚಾಯತ್ ಅದಾಲತ್‌ನ ಆದೇಶವನ್ನು ರದ್ದುಪಡಿಸಿ, ಅದೇ ಆದೇಶವನ್ನು ಬೇರೆ ಉಲ್ಲಂಘನೆಯ ಆಧಾರದಲ್ಲಿ ಉಳಿಸಿಕೊಳ್ಳುತ್ತಾರೆ. ಉಪ-ವಿಭಾಗ ಮ್ಯಾಜಿಸ್ಟ್ರೇಟ್‌ರ ಈ ಕ್ರಮವನ್ನು ಪ್ರಶ್ನಿಸಲಾಯಿತು. ಸೂಕ್ತ ಕಾರಣಗಳೊಂದಿಗೆ ಇದರ ವಿಧಿಬದ್ಧತೆಯನ್ನು ನಿರ್ಧರಿಸಿ.